"ವಿದೌಟ್ ಲೌಂಜ್."
"ವಿದೌಟ್ ಲೌಂಜ್. ಸಿಂಗಲ್ ಬೆಡ್."
"ನಮ್ಮಲ್ಲಿ ಸಿಂಗಲ್ ಬೆಡ್ ಇಲ್ಲ, ಎಲ್ಲಾ ಡಬಲ್ ಬೆಡ್."
"ಡಬಲ್ ಬೆಡ್ ಕಟ್ಟಿಕೊಂಡು ನಾನೇನು ಮಾಡಲಿ? ನಾನಿರೋದು ಒಬ್ಬನೇ!"
"ದಾಟ್ ಈಸ್ ಎ ಪಿಟಿ!"
"ಡಬಲೇ ಕೊಡಿ. ಅಡ್ಡಕೆ ಮಲಗಿದರಾಯಿತು1"
"ಸಾಫ್ಟ್ ಬೆಡ್ ಇಲ್ಲಾ ಹಾರ್ಡ್ ಬೆಡ್?"
"ಎಂದರೆ?"
"ಕೆಲವರಿಗೆ ಸಾಫ್ಟ್ ಬೆಡ್ ಆಗುವುದಿಲ್ಲ, ಸೊಂಟನೋವು."
"ನನಗಿನ್ನೂ ಬಂದಿಲ್ಲ, ಸಾಫ್ಟೇ ಕೊಡಿ."
"ತಲೆದಿಂಬು?"
"ಬೇಕಲ್ಲ?"
"ಎಷ್ಟು ಬೇಕು ಅಂತ."
"ಒಂದು ಐದಾರು ಇರ್ಲಿ."
"ಐಎಸ್‌ಡಿ ಫೆಸಿಲಿಟಿ?"
"ಅಗತ್ಯವಿಲ್ಲ."
"ನಿಲುಗನ್ನಡಿ ಇರುವ ವಾರ್ಡ್‌ರೋಬ್ ಅಥವಾ ನಿಲುಗನ್ನಡಿ ಇಲ್ಲದ್ದು?"
"ನಿಲುಗನ್ನಡಿ ಬೇಡ. ನನಗೆ ನನ್ನದೇ ಪ್ರತಿಬಿಂಬ ನೋಡಿದರೆ ಭಯವಾಗುತ್ತದೆ."
"ಬಾತ್ ಮತ್ತು ಶವರ್ ಅಥವ ಶವರ್ ಓನ್ಲಿ?"
"ಎರಡೂ ಇರ್ಲಿ, ಬೆಳಿಗ್ಗೆ ಬಾತ್, ಸಂಜೆ ಶವರ್! ಹ್ಹ ಹ್ಹ ಹ್ಹಾ!"
"ವಾಸ್ತು ಕಂಪ್ಲಯೆನ್ಸ್?"
"ಎಂದರೆ?"
"ಈಸ್ಟ್ ಫೇಸಿಂಗ್, ವೆಸ್ಟ್ ಪೇಸಿಂಗ್, ನಾರ್ತ್ ಪೇಸಿಂಗ್, ಸೌತ್ ಫೇಸಿಂಗ್, ನಾರ್ತ್ ಈಸ್ಟ್ ಫೇಸಿಂಗ್..."
"ನಾರ್ತ್ ಈಸ್ಟ್ ಫೇಸಿಂಗ್ ಕೊಡಿ. ನಾನಲ್ಲಿ ಕೆಲವು ವರ್ಷ ಇದ್ದೆ."
"ಫ್ರೆಂಚ್ ವಿಂಡೋಸ್."
"ಬೇಡ, ಜರ್ಮನ್ ವಿಂಡೋಸ್ ಕೊಡಿ. ಐ ಹೇಟ್ ದ ಫ್ರೆಂಚ್, ಜರ್ಮನ್ಸ್ ಆರ್ ಬೆಟರ್!"
"ಜರ್ಮನ್ ವಿಂಡೋಸ್ ಅಂತ ಇಲ್ಲ. ಕಾಮನ್ ವಿಂಡೋಸ್ ಇದೆ."
"ಆಯ್ತು, ಕಾಮನ್ ಕೊಡಿ. ಕಾಮನ್ ಎಂದರೆ ಏನು?"
"ನೆಲದಿಂದ ನಾಲ್ಕಡಿ ಎತ್ತರ ಇರುತ್ತದೆ."
"ಫ್ರೆಂಚ್ ಅಂದರೆ?"
"ನೆಲದಿಂದ ಸುರುವಾಗುತ್ತೆ. ಡೋರ್ ಕಮ್ ವಿಂಡೋ. ಓಪನಿಂಗ್ ಟು ಎ ಗಾರ್ಡನ್."
"ನನಗೆ ಕಿಟಕಿ ಬಳಿ ಕುಳಿತು ಏನಾದರೂ ಓದುವುದು ಇಷ್ಟ. ಕಾಮನ್, ಐ ಏಮ್ ಅ ಕಾಮನರ್."